ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 111-119
©*IIMRD*, Mysuru
IIMRD JOURNALS
www.iimrd.com

# ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು: ಒಂದು ಅಧ್ಯಯನ

**ಮಹದೇವಸ್ವಾಮಿ. ಕೆ.ಎಸ್.[1] ಮತ್ತು ಡಾ.ಆರ್.ಗೋಪಾಲರಾಜು[2]**

**ಪೀಠಿಕೆ**

ಪ್ರವಾಸೋದ್ಯಮವು ರಾಜ್ಯದ ಅಥವಾ ದೇಶದ ಪ್ರತಿಷ್ಠೆಯ ಕೈಗನ್ನಡಿಯಾಗಿದ್ದು, ಜನರನ್ನು ಆಕರ್ಶಿಸುವುದರ ಜೊತೆಗೆ ರಾಷ್ಟ್ರದ ಅಥವಾ ರಾಜ್ಯದ ಆದಾಯದ ಮೂಲಗಳಲ್ಲಿ ಒಂದಾಗಿದೆ ಎಂದರೆ ತಪ್ಪಾಗಲಾರದು. ನಮ್ಮ ದೇಶದ ಹಲವು ರಾಜ್ಯಗಳಲ್ಲಿ ಕರ್ನಾಟಕವು ಕೂಡ ಪ್ರವಾಸಿ ತಾಣವಾಗಿದೆ. ಅದರಲ್ಲೂ ಬೆಂಗಳೂರು ಹಲವು ಪ್ರವಾಸಿಗರನ್ನು ಕೈಬೀಸಿ ಕರೆಯುವಂತಹ ಸ್ಥಳಗಳನ್ನು ಹೊಂದಿರುವಂತಹದ್ದು ಹೆಮ್ಮೆಯ ವಿಷಯ. ಬೆಂಗಳೂರಿಗೆ ಪ್ರವಾಸಕ್ಕಾಗಿ ದೇಶ–ವಿದೇಶಗಳಿಂದ ಪ್ರವಾಸಿಗರು ಭೇಟಿ ನೀಡುತ್ತಿದ್ದು, ಅದರಲ್ಲೂ ಬೆಂಗಳೂರಿನ **"ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನವೂ"** ವಿಶೇಷವಾಗಿದೆ. ಬೆಂಗಳೂರಿನಿಂದ ಈ ಜೈವಿಕ ಉದ್ಯಾನವನವು 22 ಕಿ.ಮೀ. ದಕ್ಷಿಣಕ್ಕಿದ್ದು, ಉದ್ಯಾನ ವನವನ್ನು ತಲುಪಲು ಮೂವತ್ತು ನಿಮಿಷ ಬೇಕಾಗುತ್ತದೆ. ಇಲ್ಲಿ ನೈಸರ್ಗಿಕ ಜೀವಿಗಳ ಸಂಪನ್ಮೂಲವು ಹೇರಳವಾಗಿರುವುದು ವಿಶೇಷವಾಗಿದೆ.

ಪ್ರಸ್ತುತ 731.88 ಎಕರೆ ವಿಸ್ತೀರ್ಣವನ್ನು ಹೊಂದಿರುವ ಈ ಜೈವಿಕ ಉದ್ಯಾನವನವು ಆಕರ್ಷಕ ಪ್ರವಾಸಿ ತಾಣವಾಗಿ ರೂಪುಗೊಂಡಿದೆ. ಈ ಜೈವಿಕ ಉದ್ಯಾನವನದಲ್ಲಿ ಹುಲಿ ಮತ್ತು ಸಿಂಹ ಸಂರಕ್ಷಣಾ ತಾಣವಾಗಿದ್ದು, ಭಾರತದಲ್ಲಿನ ಹುಲಿ, ಬಿಳಿಹುಳಿ, ಸಿಂಹ ಹಾಗೂ ಇನ್ನಿತರ ಸಸ್ತನಿಗಳ ಆಶ್ರಯ ತಾಣವಾಗಿದೆ. ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು ಏರ್ಪಡಿಸಿರುವ ಹುಲಿ ಸಫಾರಿ ಮತ್ತು ಸಿಂಹ ಸಫಾರಿ ಗ್ರಾಂಡ್ ಸಫಾರಿಗಳು ಸಂರಕ್ಷಣಾ ತಾಣದ ಆಕರ್ಷಕ ಬಿಂದುವಾಗಿರುವುದಲ್ಲದೆ, ಆರ್ಥಿಕ ಕ್ಷೇತ್ರಕ್ಕೂ ಪೂರಕವಾಗಿದೆ. ಇಲ್ಲಿನ ಸಣ್ಣ ಪ್ರಾಣಿ ಸಂಗ್ರಹಾಲಯದಲ್ಲಿ ಪ್ರಾಣಿಗಳ ಪ್ರಾತಿನಿಧಿಕ ಪ್ರದರ್ಶನವನ್ನು ನೋಡಬಹುದು. ಇಲ್ಲಿ ಸರೀಸೃಪಗಳ ಉದ್ಯಾನವನದ ಜೊತೆಗೆ ಒಂದು ಸಣ್ಣ ರಂಗ ಮಂದಿರವು ಆಕರ್ಷಣೀಯವಾಗಿರುವುದು ವಿಶೇಷ.

ದೇಶದ ಮೊದಲ ಚಿಟ್ಟೆ ಉದ್ಯಾನವನವನ್ನು ಇಲ್ಲಿಯೇ ಸ್ಥಾಪಿಸಲಾಗಿದ್ದು, ಇದು 2.5 ಎಕರೆಯಷ್ಟು ವಿಸ್ತೀರ್ಣವಾಗಿದೆ. ಇದರಲ್ಲಿ ಚಿಟ್ಟೆ ಸಂರಕ್ಷಣಾ ಘಟಕ ಸಂಗ್ರಹಾಲಯ ಹಾಗೂ ಶ್ರವಣ ದೃಶ್ಯ ಕೊಠಡಿಯೂ ಉಂಟು ಹಾಗೂ ಚಿಟ್ಟೆಗಳ ಜೀವನಕ್ಕೆ ಅವಶ್ಯಕವಾದ ನೈಸರ್ಗಿಕ ಪರಿಸರವನ್ನು ಕಲ್ಪಿಸಲಾಗಿದೆ. ಪ್ರತಿದಿನ

[1] ಸಂಶೋಧಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
[2] ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮುಂಜಾನೆ ಟ್ರೆಕ್ಕಿಂಗ್ ವ್ಯವಸ್ಥೆಯನ್ನು ಕಾಣಬಹುದು. ಬನ್ನೇರುಘಟ್ಟ ಅರಣ್ಯ ಧಾಮದಲ್ಲಿ ಮುಂಜಾನೆಯ ಸವಿಮನ ಸವಿಯುವುದೆಂದರೆ ಪ್ರಕೃತಿ ಮಡಿಲ ಪರಕಾಯ ಪ್ರವೇಶ ಮಾಡಿದಂತೆ.

ಈ ಜೈವಿಕ ಉದ್ಯಾನವನದಲ್ಲಿ 14 ಮಂದಿ ಖಾಯಂ ನೌಕರರು, ಗುತ್ತಿಗೆ ಆಧಾರದ ಮೇಲೆ 176 ಮಂದಿ, ಹೊರ ಗುತ್ತಿಗೆ ಆಧಾರದ ಮೇಲೆ 76 ಮಂದಿ ನೌಕರರು, ಕ್ಷೇಮನಿಧಿ ನೌಕರರು 40 ಮಂದಿ ಸೇರಿದಂತೆ ಒಟ್ಟು 306 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಈ ನೌಕರರ ಬದುಕಿನ ಬವಣೆಯನ್ನು ಗಮನಿಸುವುದಾದರೆ ವೃತ್ತಿ ಭದ್ರತೆಗಾಗಿ ದಿನವಿಡಿ ಪರಿತಪಿಸುವ ಪರಿಸ್ಥಿತಿ ಶೋಚನೀಯವಾಗಿದ್ದು, ಇವರ ಬಗೆಗಿನ ಅರಿವು ಮೂಡಿಸುವುದೇ ಈ ಲೇಖನದ ಮೂಲ ಉದ್ದೇಶವಾಗಿದೆ.

ಪ್ರಾಥಮಿಕ ಹಂತದಲ್ಲಿ ನೌಕರರು ಎಂದರೆ ಯಾರು? ಎನ್ನುವುದು ಮುಖ್ಯ. ಒಂದು ನಿಗಧಿತ ಸ್ಥಳದಲ್ಲಿ ನಿಗದಿಪಡಿಸಿದ ಕೆಲಸವನ್ನು ವಾರದಲ್ಲಿನ ಬಟವಾಡೆ, ದಿನಗೂಲಿ ಅಥವಾ ತಿಂಗಳ ವೇತನದ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ವ್ಯಕ್ತಿಯನ್ನು **ಕಾರ್ಮಿಕ ಅಥವಾ ನೌಕರ** ಎಂದು ಹೇಳಬಹುದಾಗಿದ್ದು, ಎನ್.ಎಸ್. ಸಂಗೊಳ್ಳಿಯವರ ಕಾರ್ಮಿಕರ ಕಾನೂನು ಎಂಬ ಪುಸ್ತಕದಲ್ಲಿ ಉಲ್ಲೇಖಿತವಾಗಿರುವಂತೆ ಯಾವುದೇ ವ್ಯಕ್ತಿ ದೈಹಿಕ, ಕುಶಲ ಅಥವಾ ಅಕುಶಲ, ತಾಂತ್ರಿಕ, ಮೇಲ್ವಿಚಾರಣೆ ಕೆಲಸವನ್ನು ಅಥವಾ ಇತರೆ ಕೆಲಸವನ್ನು ಸಂಭಾವನೆಗಾಗಿ ನಿರ್ವಹಿಸುತ್ತಿದ್ದರೆ ಆತನನ್ನು ಕೆಲಸಗಾರ/ನೌಕರ ಎಂದು ಉಲ್ಲೇಖಿಸುತ್ತಾರೆ.

ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿನ ಪ್ರಾಣಿ–ಪಕ್ಷಿಗಳ ಪಾಲನೆ ಪೋಷಣೆ ಮತ್ತು ಸ್ವಚ್ಛತೆ ಕಾಪಾಡುವಿಕೆಯಲ್ಲದೆ ಅವುಗಳ ರಕ್ಷಣೆ ಹಾಗೂ ಪ್ರೇಕ್ಷಕ ಮೇಲ್ವಿಚಾರಣೆ ಜೊತೆ ಇನ್ನಿತರ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಇರುವ ಉದ್ಯಾನವನದ ಕೆಲಸಗಾರರನ್ನು **"ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿನ ನೌಕರರು"** ಎಂದು ಕರೆಯಬಹುದಾಗಿದ್ದು, ಇವರಲ್ಲಿ ಖಾಯಂ, ಒಳಗುತ್ತಿಗೆ, ಹೊರಗುತ್ತಿಗೆ, ಎಂಬ ನೌಕರರ ಬಗೆಗೆಗಳನ್ನು ನೋಡಬಹುದಾಗಿದೆ.

**ಅಧ್ಯಯನದ ಉದ್ದೇಶಗಳು**

- ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿನ ನೌಕರರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ತಿಳಿಯುವುದು.
- ವೃತ್ತಿಯಲ್ಲಿನ ಸಮಸ್ಯೆಗಳು ಮತ್ತು ಲಭ್ಯವಿರುವ ಸೌಲಭ್ಯಗಳನ್ನು ತಿಳಿಯುವುದು.

**ಅಧ್ಯಯನದ ವಿಧಾನ**

ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿನ ನೌಕರರ ಸ್ಥಿತಿಗತಿಗಳನ್ನು ತಿಳಿಯುವ ಸಲುವಾಗಿ ಕ್ಷೇತ್ರಾಧ್ಯಯನ ಕೈಗೊಂಡು ರಚಿತ ಪ್ರಶ್ನಾವಳಿ ಮುಖಾಂತರ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಕೋಷ್ಟಕ 1: ನೌಕರರ ವಿದ್ಯಾರ್ಹತೆಯ ವಿವರ**

| ಕ್ರ.ಸಂ. | ನೌಕರರ ವಿದ್ಯಾರ್ಹತೆ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | 1 ರಿಂದ 5ನೇ ತರಗತಿ | 6 | 30 |
| 2 | 5 ರಿಂದ 10ನೇ ತರಗತಿ | 7 | 35 |
| 3 | ಪಿ.ಯು.ಸಿ. | 3 | 15 |
| 4 | ಪದವಿ | – | – |
| 5 | ಸ್ನಾತಕೋತ್ತರ ಪದವಿಯಿಂದ ಪಿಹೆಚ್.ಡಿ. ವರೆಗೆ | – | – |
| 6 | ಅನಕ್ಷರಸ್ಥರು | 4 | 20 |
| | **ಒಟ್ಟು** | **20** | **100** |

ಕೋಷ್ಟಕ 1ರಲ್ಲಿ ಪ್ರತಿಕ್ರಿಯಾರ್ಥಿಗಳ ಶೈಕ್ಷಣಿಕ ವಿವರಗಳನ್ನು ತೋರಿಸಲಾಗಿದೆ. ಕೋಷ್ಟಕದ ಪ್ರಕಾರ ಬೆಂಗಳೂರಿನ ಬನ್ನೇರು ಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿ 1 ರಿಂದ 5ನೇ ತರಗತಿ ವಿದ್ಯಾರ್ಹತೆಯನ್ನು ಹೊಂದಿರುವ 6 (ಶೇ. 30) ನೌಕರರು ಕಾರ್ಯನಿರ್ವಹಿಸುತ್ತಿದ್ದರೆ, 7 (ಶೇ. 35) ನೌಕರರು 5 ರಿಂದ 10ನೇ ತರಗತಿ ವಿದ್ಯಾರ್ಹತೆಯನ್ನು ಹೊಂದಿದ್ದಾರೆ. 3 (ಶೇ. 15) ನೌಕರರು ಪಿ.ಯು.ಸಿ. ವಿದ್ಯಾರ್ಹತೆಯನ್ನು ಹೊಂದಿದ್ದು ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಯಾವುದೇ ನೌಕರರು ಪಡೆದಿಲ್ಲದಿರುವುದು ಕಂಡುಬಂದಿದೆ.

**ಕೋಷ್ಟಕ 2: ವಾಸಿಸುವ ಮನೆಯ ಮಾದರಿಯ ವಿವರ**

| ಕ್ರ.ಸಂ. | ಮನೆಯ ವಿಧ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | ಗುಡಿಸಲು ಮನೆ | – | – |
| 2 | ಹೆಂಚಿನ ಮನೆ | 7 | 35 |
| 3 | ಶೀಟಿನ ಮನೆ | 10 | 50 |
| 4 | ಮೊಲ್ಡ್/ಆರ್.ಸಿ.ಸಿ./ತಾರಸಿ ಮನೆ | 3 | 15 |
| | **ಒಟ್ಟು** | **20** | **100** |

ಮೇಲಿನ ಕೋಷ್ಟಕವು ಮಾದರಿಗೆ ಆಯ್ಕೆಗೊಂಡು ಪ್ರತಿಕ್ರಿಯಿಸಿದ ನೌಕರರು ವಾಸಿಸುತ್ತಿರುವ ಮನೆಯ ಮಾದರಿಯನ್ನು ಪ್ರಸ್ತುತ ಪಡಿಸುತ್ತಿದ್ದು, ಹೆಂಚಿನ ಮನೆಯಲ್ಲಿ 7 (ಶೇ. 35) ಮಂದಿ, 10 (ಶೇ.

50) ನೌಕರರು ಶೀಟಿನ ಮನೆಯಲ್ಲಿಯೂ ಅಂತೆಯೇ 3 (ಶೇ. 15) ನೌಕರರು ಮಾತ್ರ ಆರ್.ಸಿ.ಸಿ. ಮನೆಯಲ್ಲಿ ವಾಸಿಸುತ್ತಿರುವುದನ್ನು ಕಾಣಬಹುದಾಗಿದ್ದು ಅತೀಹೆಚ್ಚು ನೌಕರರು ತಗಡಿನಿಂದ ತಯಾರಿಸಿದ ಶೀಟಿನ ಮನೆಯಲ್ಲಿ ವಾಸವಾಗಿರುವುದು ಗಮನಾರ್ಹ ಅಲ್ಲದೆ, ಶೇ. 15 ನೌಕರರು ಭೋಗ್ಯದ ಮನೆಯಲ್ಲಿಯೂ ಶೇ. 35 ನೌಕರರು ಸ್ವಂತ ಮನೆಯನ್ನು ಹೊಂದಿದ್ದಾರೆ. ಅಲ್ಲದೆ ಶೇ. 50 ನೌಕರರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಅತೀ ಹೆಚ್ಚು ನೌಕರರು ಬಾಡಿಗೆ ಮನೆಯಲ್ಲಿ ವಾಸವಿರುವುದು ಕಂಡುಬಂದಿದೆ. ಅಲ್ಲದೆ ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನಕ್ಕೆ ವೃತ್ತಿ ನಿರ್ವಹಣೆಗಾಗಿ ಶೇ. 45 ನೌಕರರು 1 ರಿಂದ 5 ಕಿ.ಮೀ. ದೂರದಿಂದಲೂ ಶೇ. 10 ಮಂದಿ ನೌಕರರು 5 ರಿಂದ 10 ಕಿ.ಮೀ. ದೂರದಿಂದಲೂ, ಶೇ. 25 ಮಂದಿ ನೌಕರರು 10 ರಿಂದ 15 ಕಿ.ಮೀ. ದೂರದಿಂದಲೂ, ಶೇ. 15 ನೌಕರರು 15 ರಿಂದ 20 ಕಿ.ಮೀ. ಅಂತರದಿಂದಲೂ ಬರುವುದನ್ನು ಗಮನಿಸಿದಾಗ ಆಶ್ಚರ್ಯವೆಂದರೆ ಶೇ. 5 ನೌಕರರು 20 ರಿಂದ 30 ಕಿ.ಮೀ. ದೂರದಿಂದ ಕ್ರಮಿಸುತ್ತಾರೆಂದಾಗ ನೌಕರರ ಸಮಸ್ಯೆಗಳಿಗೆ ಇದೊಂದು ಕೈಗನ್ನಡಿಯಾಗಿದೆ.

**ಕೋಷ್ಠಕ 3: ನೌಕರಿಯ ಸ್ವರೂಪ**

| ಕ್ರ.ಸಂ. | ನೌಕರಿಯ ವಿಧ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | ಖಾಯಂ ನೌಕರಿ | 3 | 15 |
| 2 | ಒಳ ಗುತ್ತಿಗೆ | 6 | 30 |
| 3 | ಹೊರ ಗುತ್ತಿಗೆ | 11 | 55 |
| | **ಒಟ್ಟು** | **20** | **100** |

ಮೇಲಿನ ಕೋಷ್ಠಕವು ಮಾದರಿಗೆ ಆಯ್ಕೆಗೊಂಡು ಪ್ರತಿಕ್ರಿಯಿಸಿದ ನೌಕರರ ನೌಕರಿಯ ವಿಧವನ್ನು ತಿಳಿಸುತ್ತದೆ. 3 (ಶೇ. 15) ನೌಕರರು ಖಾಯಂ ನೌಕರರಾಗಿದ್ದರೆ 6 (ಶೇ. 30) ಮಂದಿ ಒಳ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ. ಹಾಗೆ 11 (ಶೇ. 55) ನೌಕರರು ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು ಅತೀ ಹೆಚ್ಚು ನೌಕರರು ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬಂದಿದೆ. ರಾಷ್ಟ್ರೀಯ ಉದ್ಯಾನವನದಲ್ಲಿ ಕೆಲಸ ನಿರ್ವಹಿಸುವುದು ಹೆಮ್ಮೆ ವೃತ್ತಿಯನ್ನು ಖಾಯಂಗೊಳಿಸುತ್ತಾರೆಂಬ ಆಶಾ ಭಾವನೆಯಿಂದ ಇಲ್ಲಿನ ನೌಕರರು ಉದ್ಯೋಗದಲ್ಲಿ ಹಲವು ತೊಡಕುಗಳಿದ್ದರೂ ಕಾರ್ಯ ನಿರ್ವಹಿಸುತ್ತಿರುವುದನ್ನು ಗಮನಿಸಬಹುದಾಗಿದೆ.

**ಕೋಷ್ಠಕ 4: ಮಾಸಿಕ ಸಂಬಳದ ವಿವರ**

| ಕ್ರ.ಸಂ. | ಮಾಸಿಕ ಸಂಬಳ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | 1 ರಿಂದ 5 ಸಾವಿರ | – | – |
| 2 | 5 ರಿಂದ 10 ಸಾವಿರ | – | – |
| 3 | 10 ರಿಂದ 15 ಸಾವಿರ (ಹೊರ ಗುತ್ತಿಗೆ) | 11 | 55 |
| 4 | 15 ರಿಂದ 20 ಸಾವಿರ (ಒಳ ಗುತ್ತಿಗೆ) | 6 | 30 |
| 5 | 20 ರಿಂದ 30 ಸಾವಿರ (ಖಾಯಂ ನೌಕರರು) | 3 | 15 |
| 6 | 30 ಸಾವಿರಕ್ಕೂ ಹೆಚ್ಚು | – | – |
| | **ಒಟ್ಟು** | **20** | **100** |

ಮೇಲಿನ ಕೋಷ್ಠಕವು ಮಾದರಿಗೆ ಆಯ್ಕೆಗೊಂಡು ಪ್ರತಿಕ್ರಿಯಿಸಿದ ನೌಕರರ ಮಾಸಿಕ ವೇತನದ ವಿವರವನ್ನು ಪ್ರಸ್ತುತ ಪಡಿಸುತ್ತಿದ್ದು ರೂ. 10 ರಿಂದ 15 ಸಾವಿರ ವೇತನವನ್ನು 11 (ಶೇ. 55) ಮಂದಿ ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಪಡೆಯುತ್ತಿದ್ದರೆ, 6 ಮಂದಿ (ಶೇ. 30) ರಷ್ಟು ಒಳ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು 15 ರಿಂದ 20 ಸಾವಿರ ರೂ. ವೇತನವನ್ನು ಪಡೆಯುತ್ತಿದ್ದಾರೆ.

ಹಾಗೆಯೇ 20 ರಿಂದ 30 ಸಾವಿರ ರೂ. ವೇತನವನ್ನು ಖಾಯಂ ನೌಕರರು ಪಡೆಯುತ್ತಿರುವುದು ಕಂಡುಬಂತು. ಈ ವೇತನವು ಕೌಟುಂಬಿಕ ನಿರ್ವಹಣೆಗೆ ಸಾಕಾಗುತ್ತದೆ ಎಂದು 3 (ಶೇ. 15) ಮಂದಿ ಖಾಯಂ ನೌಕರರು ಪ್ರತಿಕ್ರಿಯಿಸಿದರೆ ಸಾಕಾಗುವುದಿಲ್ಲ ಎಂದು 11 (ಶೇ. 55) ಮಂದಿ ಹೊರ ಗುತ್ತಿಗೆ ನೌಕರರು ಹೇಳಿದ್ದಾರೆ. ಹಾಗೆಯೇ ಸಾಧಾರಣ ಎನ್ನುವ ಅಭಿಪ್ರಾಯವನ್ನು 6 (ಶೇ. 30) ಮಂದಿ ಒಳ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ತಿಳಿಸಿದ್ದಾರೆ.

ಹಾಗೆಯೇ 1 ರಿಂದ 5 ವರ್ಷಗಳ ಕಾಲ ಇಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವ 6 (ಶೇ. 30) ರಷ್ಟು ನೌಕರರು ಕಂಡುಬಂದರೆ 5 ರಿಂದ 10 ವರ್ಷಗಳಿಂದ ಇಲ್ಲಿಯೇ ವೃತ್ತಿ ನಿರ್ವಹಿಸುತ್ತಿದ್ದೇವೆ ಎಂದು 5 (ಶೇ. 25) ರಷ್ಟು ನೌಕರರು ಪ್ರತಿಕ್ರಿಯಿಸಿದ್ದಾರೆ. 10 ರಿಂದ 15 ವರ್ಷಗಳಿಂದಲೂ ಇಲ್ಲಿಯೇ ನೌಕರಿ ಮಾಡುತ್ತಿದ್ದೇವೆ ಎಂದು 6 (ಶೇ. 30) ನೌಕರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ 15 ಕ್ಕಿಂತಲೂ ಹೆಚ್ಚು ವರ್ಷಗಳಿಂದ ನಾವು ಇಲ್ಲಿಯೇ ಕೆಲಸ ಮಾಡುತ್ತಿದ್ದೇವೆ ಎಂದು 3 (ಶೇ. 15) ನೌಕರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**ಕೋಷ್ಟಕ 5:**

**ಬನ್ನೇರು ಘಟ್ಟದಲ್ಲಿನ ಪ್ರಾಣಿ ಪಕ್ಷಿಗಳ ಕ್ಷೇಮಾಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ವಿವರ**

| ಕ್ರ.ಸಂ. | ಇರುವ ಕಾರ್ಯಕ್ರಮಗಳು/ನೌಕರರ ಅಭಿಪ್ರಾಯ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | ಹೊಸ ಹೊಸ ಪ್ರಾಣಿಗಳನ್ನು ದತ್ತು ಪಡೆಯುವುದು | 12 | 60 |
| 2 | ಪ್ರಾಣಿಗಳ ವಿನಿಮಯ | 2 | 10 |
| 3 | ಉತ್ತಮವಾಗಿದೆ | 2 | 10 |
| 4 | ಕಾರ್ಯಕ್ರಮಗಳು ಇವೆ | 2 | 10 |
| 5 | ಇವೆ ಗೊತ್ತಿಲ್ಲ | 2 | 10 |
| | **ಒಟ್ಟು** | **20** | **100** |

ಮೇಲಿನ ಕೋಷ್ಟಕವು ಮಾದರಿಗೆ ಆಯ್ಕೆಗೊಂಡು ಪ್ರತಿಕ್ರಿಯಿಸಿದ ನೌಕರರು ಪ್ರಾಣಿ ಪಕ್ಷಿಗಳ ಅಭಿವೃದ್ಧಿಗಾಗಿ ಇರುವ ಕಾಯಕ್ರಮಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಕೋಷ್ಠಕವಾಗಿದ್ದು, ಹೊಸ ಹೊಸ ಪ್ರಾಣಿಗಳನ್ನು ದತ್ತು ಪಡೆಯುವುದು (ದತ್ತು ಸ್ವೀಕಾರ ಯೋಜನೆ) ಎಂದು ಎಂದು 12 (ಶೇ. 60) ನೌಕರರು ಪ್ರತಿಕ್ರಿಯಿಸಿದರೆ, ಪ್ರಾಣಿಗಳ ವಿನಿಮಯ ಕಾರ್ಯಕ್ರಮ ಎಂದು 2 (ಶೇ. 10) ನೌಕರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಹಾಗೂ ಉತ್ತಮವಾಗಿದೆ ಎಂದು 2 (ಶೇ. 10) ನೌಕರರು ಹೇಳಿದರೆ, ಕಾರ್ಯಕ್ರಮಗಳು ಇವೆ ಎಂದು 2 (ಶೇ. 10) ನೌಕರರು ಪ್ರತಿಕ್ರಿಯಿಸಿದ್ದಾರೆ. ಕಾರ್ಯಕ್ರಮಗಳು ಇವೆ ಆದರೆ ನನಗೆ ಗೊತ್ತಿಲ್ಲ ಎಂದು 2 (ಶೇ.10) ನೌಕರರು ಪ್ರತಿಕ್ರಿಯಿಸಿದ್ದಾರೆ ಉದ್ಯಾನವನದ ಹಾಗೂ ಪ್ರಾಣಿ–ಪಕ್ಷಿ ಅಭಿವೃದ್ಧಿಗೆ ಮಾತ್ರ ಆದ್ಯತೆ ನೀಡುತ್ತಿದ್ದು, ನೌಕರರ ಶ್ರೇಯಾಭಿವೃದ್ಧಿಗಾಗಿ ಆಗಲಿ ಅಥವಾ ವೃತ್ತಿಯನ್ನು ಖಾಯಂಗೊಳಿಸುವ ಪ್ರಕ್ರಿಯೆಯಾಗಲಿ ಕಂಡುಬಂದಿಲ್ಲ. ಈ ವಿಚಾರವನ್ನು ಕುರಿತು ನೌಕರರನ್ನು ಪ್ರಶ್ನಿಸಿದಾಗ ಹೊರಗುತ್ತಿಗೆಯವರ ವೃತ್ತಿಯನ್ನು ಖಾಯಂಗೊಳಿಸಲು ಯಾವುದೇ ಕ್ರಮವನ್ನು ವಹಿಸುತ್ತಿಲ್ಲ ಎಂದು 10 (ಶೇ. 50) ನೌಕರರು ಪ್ರತಿಕ್ರಿಯಿಸಿದರೆ, ವೃತ್ತಿಯ ಹಿರಿತನದ ಆಧಾರದ ಮೇಲೆ ಖಾಯಂಗೊಳಿಸುತ್ತೇವೆ ಎಂದು ಹೇಳುತ್ತಲೇ ಇದ್ದು ಖಾಯಂಗೊಳಿಸುತ್ತಿಲ್ಲ ಎಂದು 10 (ಶೇ. 50) ನೌಕರರು ತಿಳಿಸಿದ್ದಾರೆ. ಆಡಳಿತ ಮಂಡಳಿಯು ಇಲ್ಲಿನ ನೌಕರರನ್ನು ದುಡಿಮೆಗಾಗಿ ಮಾತ್ರ ಹೋಲೈಸುತ್ತಿದ್ದು, ನೌಕರರ ಬದುಕಿಗೆ ಯಾವುದೇ ರೀತಿಯ ಕಾರ್ಯಕ್ರಮವನ್ನು ಕೈಗೊಳ್ಳದಿರುವುದು ಕಂಡುಬರುತ್ತದೆ. ನೌಕರರಿಗೆ ಕೆಲಸದ ವೇಳೆ ಶೂ ಮತ್ತು ಕೈಗವಚಗಳನ್ನು ಮಾತ್ರ ವಿತರಿಸುತ್ತಿದ್ದು, ಶೇ. 85 ನೌಕರರಿಗೆ ಈ ಸೌಲಭವು ಲಭ್ಯವಾದರೂ ಶೇ. 15 ಮಂದಿಗೆ ಲಭ್ಯ ಇಲ್ಲದಿರುವುದು ಕಂಡು ಬಂದಿದ್ದು ನೌಕರರನ್ನು ನಿರ್ಲಕ್ಷಿಸುತ್ತಿರುವುದಕ್ಕೆ ಇದೊಂದು ಉದಾಹರಣೆ ಎನ್ನಬಹುದು.

**ಕೋಷ್ಟಕ 6: ನೌಕರರು ಪಡೆಯುವ ವೈದ್ಯಕೀಯ ಚಿಕಿತ್ಸೆಯ ವಿವರ**

| ಕ್ರ.ಸಂ. | ಪಡೆಯುವ ಚಿಕಿತ್ಸೆ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | ಖಾಸಗಿ | – | – |
| 2 | ಸರ್ಕಾರಿ | 10 | 50 |
| 3 | ಇ.ಎಸ್.ಐ. | 10 | 50 |
| 4 | ಇತರೆ | – | – |
| | **ಒಟ್ಟು** | **20** | **100** |

ಮೇಲಿನ ಕೋಷ್ಟಕವು ಮಾದರಿಗೆ ಆಯ್ಕೆಗೊಂಡು ಪ್ರತಿಕ್ರಿಯಿದ ನೌಕರರು ಅನಾರೋಗ್ಯಕ್ಕೆ ಒಳಗಾದಾಗ ಪಡೆಯುವ ಚಿಕಿತ್ಸೆಯ ವಿಧವನ್ನು ಸೂಚಿಸುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತೇವೆ ಎಂದು 10 (ಶೇ. 50) ನೌಕರರು ತಿಳಿಸಿದರೆ ಇ.ಎಸ್.ಐ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತೇವೆ ಎನ್ನುವ ಅಭಿಪ್ರಾಯವನ್ನು 10 (ಶೇ. 50) ನೌಕರರು ವ್ಯಕ್ತಪಡಿಸಿದ್ದು, ಜೈವಿಕ ಉದ್ಯಾನವನದಲ್ಲಿನ ನೌಕರರಾಗಿ ತುರ್ತು ಚಿಕಿತ್ಸಾ ಸೌಲಭ್ಯಗಳು ಇದೆ ಎಂದು ಶೇ. 90 ರಷ್ಟು ನೌಕರರು ತಿಳಿಸಿದರೆ ಸಾಧಾರಣವಾಗಿದೆ ಎಂದು ಶೇ. 10 ರಷ್ಟು ನೌಕರರು ಹೇಳಿದ್ದು, ಹೆಚ್ಚಿನ ಚಿಕಿತ್ಸೆ ಅವಶ್ಯವಿದ್ದರೆ ಪಕ್ಕದ ಖಾಸಗಿ ಆಸ್ಪತ್ರೆಗೆ ಕಳುಹಿಸುತ್ತಾರೆ ಎಂದು ತಿಳಿಸಿದ್ದಾರೆ.

**ಕೋಷ್ಟಕ 7: ಪ್ರಾಣಿ ಪಕ್ಷಿಗಳ ನಿರ್ವಹಣೆಯಲ್ಲಿನ ಅಪಾಯಕಾರಿ ಸಂದರ್ಭಗಳು**

| ಕ್ರ.ಸಂ. | ನೌಕರರ ಪ್ರತಿಕ್ರಿಯೆ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | ಹೌದು | – | – |
| 2 | ಇಲ್ಲ | 18 | 90 |
| 3 | ಎಚ್ಚರಿಕೆಯಿಂದ ಇರಬೇಕು | 2 | 10 |
| | **ಒಟ್ಟು** | **20** | **100** |

ಮೇಲಿನ ಕೋಷ್ಟಕವು ಮಾದರಿಗೆ ಆಯ್ಕೆಗೊಂಡು ಪ್ರತಿಕ್ರಿಯಿಸಿದ ನೌಕರರು ಪ್ರಾಣಿ–ಪಕ್ಷಿಗಳ ನಿರ್ವಹಣೆಯಲ್ಲಿನ ಅಪಾಯಕಾರಿ ಸಂದರ್ಭಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ರುವುದರ ಬಗ್ಗೆ ತಿಳಿಯಪಡಿಸುತ್ತವೆ. ಅಪಾಯಕಾರಿ ಸಂದರ್ಭಗಳು ಇಲ್ಲ ಎಂದು 18 (ಶೇ. 90) ಮಂದಿ ನೌಕರರು ಪ್ರತಿಕ್ರಿಯಿಸಿದರೆ ಎಚ್ಚರಿಕೆಯಿಂದ ಇರಬೇಕು ಎಂದು 2 (ಶೇ. 10) ಮಂದಿ ನೌಕರರು ಪ್ರತಿಕ್ರಿಯಿಸಿದ್ದಾರೆ. ಪ್ರಾಣಿಗಳು ಮಿಲನ ಕ್ರಿಯೆಯಲ್ಲಿದ್ದಾಗ ಹಾಗೂ ಮರಿಗಳಿಗೆ ಜನ್ಮ ನೀಡಿರುವ ಸಂದರ್ಭಗಳಲ್ಲಿ ನಮ್ಮ ಮೇಳೆ

ಆಕ್ರಮಣ ಮಾಡುವ ಸಂದರ್ಭಗಳಿರುತ್ತವೆ, ಇಂತಹ ಸಂದರ್ಭಗಳಲ್ಲಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಹಾಗೂ ಪ್ರಾಣಿ ಪಕ್ಷಿಗಳ ನಿರ್ವಹಣೆಯಲ್ಲಿನ ಸಮಸ್ಯೆಗಳ ಬಗೆ ಕೇಳಿದಾಗ ಪ್ರಾಣಿ ಪಕ್ಷಿಗಳ ಸುತ್ತ ರಕ್ಷಣೆ ಹೆಚ್ಚಿಸಬೇಕು ಹಾಗೂ ಸಿಬ್ಬಂದಿಯನ್ನು ಹೆಚ್ಚಿಸಬೇಕು ಎಂದು ಶೇ. 10 ನೌಕರರು ಹೇಳಿದರೆ ಏನೂ ಸಮಸ್ಯೆಗಳಿಲ್ಲ ಎಂದು ಶೇ. 90 ರಷ್ಟು ನೌಕರರು ತಿಳಿಸಿದ್ದಾರೆ.

**ಕೋಷ್ಟಕ 8: ವೃತ್ತಿಯ ಒತ್ತಡದಿಂದ ಕೌಟುಂಬಿಕ ನಿರ್ವಹಣೆಯ ಮೇಲೆ ತೊಂದರೆ**

| ಕ್ರ.ಸಂ. | ನೌಕರರ ಪ್ರತಿಕ್ರಿಯೆ | ಪ್ರತಿಕ್ರಿಯಿಸಿದ ನೌಕರರ ಸಂಖ್ಯೆ | ಶೇಕಡ |
|---|---|---|---|
| 1 | ಹೌದು | – | – |
| 2 | ಇಲ್ಲ | 10 | 50 |
| 3 | ಸಾಧಾರಣ | 4 | 20 |
| 4 | ಕೆಲವು ಸಂದರ್ಭಗಳಲ್ಲಿ | 6 | 30 |
| | **ಒಟ್ಟು** | **20** | **100** |

ಮೇಲಿನ ಕೋಷ್ಟಕವು ಮಾದರಿಗೆ ಆಯ್ಕೆಗೊಂಡು ಪ್ರತಿಕ್ರಿಯಿಸಿದ ನೌಕರರು ಕೆಲಸದ ಜೊತೆ ಕೌಟುಂಬಿಕ ವ್ಯವಹಾರಕ್ಕೆ ತೊಂದರೆಯಾಗುವುದನ್ನು ಕುರಿತು ಪ್ರತಿಕ್ರಿಯಿಸಿದ ವಿವರವನ್ನು ತಿಳಿಸುತ್ತದೆ. ತೊಂದರೆಯಾಗುವುದಿಲ್ಲ (ಇಲ್ಲ) ಎಂದು 10 (ಶೇ. 50) ನೌಕರರು ಪ್ರತಿಕ್ರಿಯಿಸಿದರೆ, ಸಾಧಾರಣ ಎಂದು 4 (ಶೇ. 20) ನೌಕರರು ತಿಳಿಸಿದ್ದಾರೆ. ಹಾಗೆಯೇ ಕೆಲವು ಸಂದರ್ಭದಲ್ಲಿ ತೊಂದರೆಯಾಗುತ್ತದೆ ಎಂದು 6 (ಶೇ. 30) ನೌಕರರು ಪ್ರತಿಕ್ರಿಯಿಸಿದ್ದನ್ನು ನೋಡಬಹುದಾಗಿದ್ದು, ಕೌಟುಂಬಿಕ ನಿರ್ವಹಣೆಯ ಜವಾಬ್ದಾರಿಯಾಗಿದೆ ಎಂದು ಕೇಳಿದಾಗ (ಸ್ವತಃ) ಎಂದು ಶೇ. 25 ನೌಕರರು ತಿಳಿಸಿದರೆ, ಶೇ. 25 ನೌಕರರು ತಂದೆ ಎಂದು ಹೇಳಿದ್ದಾರೆ ಹಾಗೂ ತಾಯಿ ಎಂದು ಶೇ. 25 ನೌಕರರು ತಿಳಿಸಿದರೆ, ಪತ್ನಿ ಎಂದು ಶೇ. 25 ನೌಕರರು ಹೇಳಿದ್ದಾರೆ. ಹಾಗೆಯೇ ಮೇಲಾಧಿಕಾರಿಗಳ ವರ್ತನೆ ಬಗ್ಗೆ ಕೇಳಿದಾಗ ಶೇ. 90 ನೌಕರರು ಚೆನ್ನಾಗಿದೆ ಎಂದು ತಿಳಿಸಿದರೆ ಸಾಧಾರಣ ಎಂದು ಶೇ. 10 ನೌಕರರು ತಿಳಿಸಿದ್ದಾರೆ.

**ಸಂಶೋಧನಾ ಫಲಿತಾಂಶಗಳು**

- ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿನ ನೌಕರರ ಶೈಕ್ಷಣಿಕ ಮಟ್ಟವು ತೀರಾ ಹಿಂದುಳಿದ ಕಾರಣದಿಂದಾಗಿ ನೌಕರರು ಸಂಘಟಿತವಾಗಲು ಹಾಗೂ ಅವಶ್ಯಕ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.
- ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿನ ಅತೀ ಹೆಚ್ಚು ನೌಕರರು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿದ್ದು, ಖಾಯಂ ನೌಕರರ ಸಂಖ್ಯೆ ಬಹಳ ವಿರಳವಾಗಿರುವುದು ತಿಳಿದುಬಂದಿದೆ.

- ವೇತನದಲ್ಲಿ ತಾರತಮ್ಯತೆ ಕಂಡುಬರುತ್ತಿದ್ದು, ವೃತ್ತಿಯಲ್ಲಾಗಲಿ ಅಥವಾ ವೃತ್ತಿಯ ಸಮಯದಲ್ಲಾಗಲಿ ವ್ಯತ್ಯಾಸಗಳಿರುವುದಿಲ್ಲ.
- ಹುಲಿ, ಸಿಂಹ, ತೋಳ, ಚಿರತೆ ಸೇರಿದಂತೆ ಇತರ ನರಭಕ್ಷಕ ಪ್ರಾಣಿಗಳನ್ನು ಪಾಲನೆ ಮಾಡುವ ಪಾಲಕರಿಗೆ ಹೆಚ್ಚಿನ ಸೇವಾಭದ್ರತೆಯು ಅವಶ್ಯಕವಾಗಿದೆ.
- ಪ್ರಾಣಿ–ಪಕ್ಷಿಗಳ ಶ್ರೇಯಾಭಿವೃದ್ಧಿಗಾಗಿ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಮೂಲಭೂತವಾಗಿ ನೌಕರರನ್ನು ಕಡೆಗಣಿಸಿರುವುದು ಕಂಡುಬಂದಿದೆ.

**ಸಲಹೆಗಳು**

- ವೇತನದ ತಾರತಮ್ಯತೆಯನ್ನು ಸರಿಪಡಿಸಿ ಎಲ್ಲರಿಗೂ ಸಮಾನವಾದ ವೇತನವನ್ನು ನೀಡಬೇಕು.
- ನೌಕರರ ಶೈಕ್ಷಣಿಕ ಮಟ್ಟದ ಸುಧಾರಣೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
- ವೃತ್ತಿಯ ಖಾಯಂಗಾಗಿ ತುರ್ತಾಗಿ ಕ್ರಮ ಕೈಗೊಳ್ಳಬೇಕು.
- ವೃತ್ತಿಯ ಸಂದರ್ಭದಲ್ಲಿನ ರಕ್ಷಣಾ ಸಾಮಗ್ರಿಗಳ ಪೂರೈಕೆಯನ್ನು ಎಲ್ಲರಿಗೂ ತಲುಪುವಂತೆ ಯಥೇಚ್ಛವಾಗಿ ನೀಡಬೇಕು ಹಾಗೂ ವಿನೂತನ ಸಾಧನ ಸಲಕರಣೆಗಳನ್ನು ನೀಡಬೇಕು.
- ನೌಕರರಿಗೆ ನೆರವಾಗುವ ಹಾಗೆ ವಾಸಸ್ಥಳದಿಂದ ವೃತ್ತಿಯ ಸ್ಥಳಕ್ಕೆ ಉಚಿತ ವಾಹನ ಸೌಲಭ್ಯವನ್ನು ನೀಡಬೇಕು.
- ನೌಕರರ ಕ್ಷೇಮಾಭಿವೃದ್ಧಿಗಾಗಿ ಭದ್ರತಾ ಸೌಲಭ್ಯಗಳನ್ನು ಹೆಚ್ಚಿಸಬೇಕು.

**ಪರಾಮರ್ಶನ ಗ್ರಂಥಗಳು**


- ಬನ್ನೇರು ಘಟ್ಟ ಜೈವಿಕ ಉದ್ಯಾನದ ವಾರ್ಷಿಕ ವರದಿ, 2017–18.
- ಕರ್ನಾಟಕ ಕೈಪಿಡಿ ಭಾಗ–1. (2018). ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ಸಂಗೊಳ್ಳಿ ಎನ್.ಎಸ್. (2013). ಕಾರ್ಮಿಕರ ಕಾನೂನು. ವಿದ್ಯಾನಿಧಿ ಪ್ರಕಾಶನ, ಗದಗ.
- ಶ್ರೀಧರ ಅಡಿಗ. (2006). ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು (ಪ್ರವಾಸಿ ಮಾರ್ಗದರ್ಶಿ) ಚಂದನ ಪ್ರಕಾಶನ, ಬೆಂಗಳೂರು.